ಓ ಎಸ ನಂ.43/2023
ಪಿ.ಡಬ್ಲ್ಯೂ-1 ಸತೀಶ ತಂದೆ ಬಸವರಾಜ

**(ಇಂದು ದಿನಾಂಕಃ 23-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಮುಂದುವರೆದ ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ನನ್ನ ತಂದೆ ಬಸವರಾಜ ಜೀವಿತಾ ಇರುತ್ತಾರೆ. ನನ್ನ ತಂದೆಯ ಹೆಸರಿನಲ್ಲಿ ಸ್ವಲ್ಪ ಜಮೀನು ಇದೆ ಎಂದರೆ ಸರಿ. ಈ ದಾವೆಯಲ್ಲಿ ನನ್ನ ತಂದೆಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. 2ನೆ ಪ್ರತಿವಾದಿ 3ನೇ ಪ್ರತಿವಾದಿಗೆ ಜಮೀನು ಮಾರಿದ ನಂತರ ನಾನು ಸದರಿ ವ್ಯವಾಹಾರದ ಕುರಿತು ಕೇಳಿರುತ್ತೇನೆ. ನಾನು 2ನೇ ಪ್ರತಿವಾದಿ ವಿರುದ್ದ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. 2ನೇ ಪ್ರತಿವಾದಿ ಈಗಾಗಲೇ ಪಾಲಾಗಿದ್ದರಿಂದ ಮತ್ತು ನಮೂನೆ-10 ಆಗಿದ್ದರಿಂದ ಅವರ ಆಸ್ತಿ ಮಾರಾಟ ಮಾಡಿರುತ್ತಾರೆ. ನಾನು ಮತ್ತು ಪ್ರತಿವಾದಿಗಳು ನಮ್ಮ ನಮಗೆ ಬಂದ ಜಮೀನಿನ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸರ್ವೆ ನಂ.23 ರಲ್ಲಿ ಹಿಸ್ಸಾಗಳು ಆಗಿದ್ದರಿಂದ ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ನಾನು ನಮ್ಮ ತಂದೆಯನ್ನು ಆಸ್ತಿಯಲ್ಲಿ ಪಾಲು ಮಾಡಿಕೊಡುವಂತೆ ಕೇಳಿರುತ್ತೇನೆ. ನಮ್ಮ ತಂದೆ ಈಗಾಗಲೇ ಪಾಲು ಮಾಡಿಕೊಟ್ಟಿರುತ್ತೇನೆ ಎಂದು ನಮಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಹಾಕುವ ಮೊದಲು ವಕೀಲರ ಮೂಲಕ ನಾನು ಪ್ರತಿವಾದಿಗಳಿಗೆ ನಾನು ನೋಟಿಸು ಕಳುಹಿಸಿರುವುದಿಲ್ಲ. ಅವ್ವಮ್ಮ ಮತ್ತು ನಾಗಮ್ಮ ನನ್ನ ಅಕ್ಕತಂಗಿಯರು ಎಂದರೆ ಸರಿ. ಅವ್ವಮ್ಮ ನಾಗಮ್ಮರವರಿಗೆ ಪಾಲು ನೀಡಿದ ಬಗ್ಗೆ ದಾಖಲೆ ಬರೆಸಿಕೊಂಡಿರುತ್ತಿರಾ ಎಂದರೆ ಸಾಕ್ಷಿ ನ್ಯಾಯಾಲಯದ ಡಿಕ್ರಿ ಕಾಪಿ ಇರುತ್ತದೆ ಎನ್ನುತ್ತಾರೆ.

2. 1ನೇ ಪ್ರತಿವಾದಿ ನನಗೆ ಮಾಡಿಕೊಟ್ಟ ಖರೀದಿ ಪತ್ರ ಮತ್ತು 2ನೇ ಪ್ರತಿವಾದಿ 3ನೇ ಪ್ರತಿವಾದಿಗೆ ಮಾಡಿಕೊಟ್ಟ ಖರೀದಿ ಪತ್ರಗಳನ್ನು ನಾನು ರದ್ದುಪಡಿಸಿಕೊಂಡಿಲ್ಲ. 1ನೇ ಪ್ರತಿವಾದಿ ಜಮೀನಿಗೆ ಹೋದಾಗ ನಾನು ತಕರಾರು ಮಾಡಿ ಅವರಿಗೆ ಹೊಡೆ-ಬಡೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಮ್ಮ ಮೇಲೆ ಆ ಕುರಿತು ಕ್ರಿಮಿನಲ ಕೇಸು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಅವರು ಸುಳ್ಳು ಕೇಸು ಮಾಡಿರುತ್ತಾರೆ ಎನ್ನುತ್ತಾರೆ. ನಾನು 1ನೇ ಪ್ರತಿವಾದಿಗೆ ಜಮೀನಿನಲ್ಲಿ ಸಾಗುವಳಿ ಮಾಡಲು ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ಆಸ್ತಿಯನ್ನು ಹೊಡೆಯುವ ಉದ್ದೇಶದಿಂದ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದಾವೆಯಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಏನು ವಿಷಯ ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳನ್ನು ನನ್ನ ದಾವೆಯಲ್ಲಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ.

3. <u>ಪಾಟೀ ಸವಾಲುಃ 2ನೇ ಪ್ರತಿವಾದಿ ಪರ ಶ್ರೀ ಸಿ ಎಸ್ ಹೆಚ್ ವಕೀಲರಿಂದ.</u>

ನಾವು ಓ ಎಸ್ ನಂ.13/2015 ರಲ್ಲಿ ಆದ ರಾಜಿಯಂತೆ ನಾವು ದಾವಾ ಆಸ್ತಿಗಳ ಜಂಟಿ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. 2ನೇ ಪ್ರತಿವಾದಿ ತಮ್ಮ ಪಾಲಿಗೆ ಬಂದ ಜಮಿನಿನಲ್ಲಿ 3ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಉಳಿದ ಜಮೀನಿನಲ್ಲಿ 2ನೇ ಪ್ರತಿವಾದಿಗೂ ಕೂಡಾ ಪಾಲು ಇರುತ್ತದೆ ಎಂದರೆ ಸರಿ.

ಮರುವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.